# <u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ</u>

ಸಿ.ಸಿ ನಂಃ 596/2020

ಸಿಡಬ್ಲ್ಯೂಃ 10 ಪಿಡಬ್ಲ್ಯೂಃ 8

| | |
|---|---|
| ಹೆಸರುಃ | ರವಿಂದ್ರ ರಮಾಕಾಂತ ನಾಯ್ಕು |
| ತಂದೆ ಹೆಸರುಃ | ರಮಾಕಾಂತ ನಾಯ್ಕು |
| ವಯಸ್ಸುಃ | 54 ವರ್ಷ |
| ಉದ್ಯೋಗಃ | ಎ ಎಸ್ ಐ, ಎನ್ ಎಂ ಪಿ ಎಸ್ , ಶಿರಸಿ |
| ವಾಸಃ | ಶಿರಸಿ. |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 07-01-2026 ರಂದು ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ</u>**

ನಾನು ದಿಃ 28-03-2018 ರಿಂದ ದಿಃ 04-07-2021 ರ ವರೆಗೆ ಸಿದ್ದಾಪುರ ಪೋಲೀಸ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯನಿರ್ವಹಿಸಿರುತ್ತೇನೆ.

ದಿಃ 16-07-2020 ರಂದು ಬೆಳಿಗ್ಗೆ ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ, ಸಿದ್ದಾಪುರ ಸರ್ಕಾರಿ ಆಸ್ಪತ್ರೆಯಿಂದ ಎಂ ಎನ್ ಸಿ ಇದೆ ಎಂದು ಮಾಹಿತಿ ಬಂದಿದ್ದು, ಆ ಪ್ರಕಾರ ನಾನು ಸಿದ್ದಾಪುರ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ಅಲ್ಲಿ ಚಾಸಾ-1 ರವರನ್ನು ವಿಚಾರಿಸಿ, ಅವರ ಹೇಳಿಕೆ ದೂರನ್ನು ಪಡೆದುಕೊಂಡಿರುತ್ತೇನೆ. ನಂತರ ಠಾಣೆಗೆ ವಾಪಸ್ ಆಗಿ ಅದೇ ದಿನ ನಮ್ಮ ಠಾಣಾ ಕ್ರೈಂ ಸಂಖ್ಯೆ 99/2020 ರಂತೆ ಪ್ರಕರಣ ದಾಖಲಿಸಿ, ಪ್ರ.ವ.ವರದಿಯನ್ನು ತಯಾರಿಸಿ, ಮಾನ್ಯ ನ್ಯಾಯಾಲಯಕ್ಕೆ ಹಾಗೂ ನನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪಿರ್ಯಾದಿ ಮತ್ತು ಪ್ರ.ವ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ದಿಃ 16-07-2020 ರಂದು ಚಾಸಾ-1 ರವರು ಸಿದ್ದಾಪುರ ಸರ್ಕಾರ ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆ ದೂರು ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿ.ಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-1 (ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ಪ್ರ.ವ ವರದಿ ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-6 (ಎ) ಎಂದು ಗುರುತಿಸಲಾಯಿತು.

3. ದಿಃ 17-07-2020 ರಂದು ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಬೆಳಿಗ್ಗೆ 10-00 ರಿಂದ 11-00 ವರೆಗೆ ಸ್ಥಳ ಪಂಚನಾಮೆ

ಮಾಡಿರುತ್ತೇನೆ. ಸದರಿ ಪಂಚನಾಮೆ ಕಾಲಕ್ಕೆ ಪಂಚರ ಸಮಕ್ಷಮ ಸ್ಥಳದಲ್ಲಿ 4 ಕಾಡು ಜಾತಿಯ ಬಡಿಗೆ ಮತ್ತು ಒಂದು ಕತ್ತಿಯನ್ನು ವಶಪಡಿಸಿಕೊಂಡಿರುತ್ತೇನೆ.. ಸದರಿ ಪಂಚನಾಮೆ ಕಾಲಕ್ಕೆ ಸದರಿ ಸ್ಥಳದ ಪೊಟೊಗಳನ್ನು ತೆಗೆಸಿರುತ್ತೆನೆ. ಸಾಕ್ಷಿಗೆ ಈ ಹಂತದಲ್ಲಿ ಭಾವಚಿತ್ರವನ್ನು ತೋರಿಸಿದ್ದು, ಸದರಿ ಭಾವಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ-3 ಮತ್ತು 4 ಎಂದು ಗುರುತಿಸಲಾಗಿದೆ.

4. ಚಾಸಾ-1 ರವರನ್ನು ವಿಚಾರಿಸಿ ಅವರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಸದರಿ ಸ್ಥಳದಲ್ಲಿ ವಶಪಡಿಸಿಕೊಂಡ 4 ಬಡಿಗೆ ಮತ್ತು ಕತ್ತಿಯನ್ನು ತೆಗೆದುಕೊಂಡು ನಮ್ಮ ಠಾಣೆಗೆ ವಾಪಸ್ ಆಗಿ ನಮ್ಮ ಠಾಣಾ PF No 79/2020 ರಂತೆ ದಾಖಲಿಸಿ ಸದರಿ PF ನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಬಡಿಗೆ ಮತ್ತು ಕತ್ತಿ ನ್ಯಾಯಾಲಯದ ಮುಂದೆ ಇದ್ದು ಅವುಗಳು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ದಿಃ 17-07-2020 ರ ಸ್ಥಳ ಪಂಚನಾಮೆ ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿ.ಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-2 (ಸಿ) ಎಂದು ಗುರುತಿಸಲಾಯಿತು.

5. ಅದೇ ದಿನ ಚಾಸಾ-4 ರಿಂದ 8 ರವರನ್ನು ವಿಚಾರಿಸಿ ಅವರ ಹೇಳಿಕೆ ಪಡೆದುಕೊಂಡಿರುತ್ತೇನೆ.

6. ದಿಃ 30-07-2020 ರಂದು ಈ ಪ್ರಕರಣದ 1 ರಿಂದ 10 ನೇ ಆರೋಪಿತರಿಗೆ ನಮ್ಮ ಠಾಣೆಗೆ ಹಾಜರಾದ ಮೇರೆಗೆ ದಂ.ಪ್ರ.ಸಂ ಕಲಂ 41(ಎ) ರಡಿಯಲ್ಲಿ ಆರೋಪಿಗೆ ನೋಟೀಸ ನೀಡಿರುತ್ತೇನೆ. ಸದರಿ 1 ರಿಂದ 10 ನೇ ಆರೋಪಿತರಿಗೆ ನೀಡಿದ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆ ದಿಃ 30-07-2020 ರಂದು ಈ ಪ್ರಕರಣದ 1 ರಿಂದ 10 ನೇ ಆರೋಪಿತರಿಗೆ ನಮ್ಮ ಠಾಣೆಗೆ ಹಾಜರಾದ ಮೇರೆಗೆ ದಂ.ಪ್ರ.ಸಂ ಕಲಂ 41(ಎ) ರಡಿಯಲ್ಲಿ ಆರೋಪಿಗೆ ನೋಟೀಸ ಆಗಿದ್ದು, ಸದರಿ ದಾಖಲೆ ನಿ.ಪಿ-7 ರಿಂದ ನಿ.ಪಿ-16 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-7 (ಎ) ರಿಂದ ನಿ.ಪಿ-16 (ಎ) ಎಂದು ಗುರುತಿಸಲಾಯಿತು.

7. ದಿಃ 20-08-2020 ರಂದು ಚಾಸಾ-9 ರವರಿಂದ ಚಾಸಾ-1 ಮತ್ತು 4 ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿ, ಪರಿಶೀಲಿಸಿ, ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಎರಡು ಗಾಯದ ಪ್ರಮಾಣ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಈ ಹಂತದಲ್ಲಿ ಎರಡು ದಾಖಲೆಯನ್ನು ತೋರಿಸಿದ್ದು, ಸದರಿ ದಾಖಲೆಗಳು ದಿಃ 20-08-2020 ರಂದು ಚಾಸಾ-9 ರವರಿಂದ ಚಾಸಾ-1 ಮತ್ತು 4 ರವರ ಗಾಯದ ಪ್ರಮಾಣ ಪತ್ರಗಳು ಆಗಿದ್ದು, ಸಾಕ್ಷಿ ಸದರಿ ದಾಖಲೆ ನೋಡಿ ಗುರುತಿಸಿದ್ದು, ಅದು ಈಗಾಗಲೇ ನಿ.ಪಿ-5 ಮತ್ತು 6 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿ.ಪಿ-5(ಬಿ) ಮತ್ತು ನಿ.ಪಿ-

6(ಬಿ) ಎಂದು ಗುರುತಿಸಲಾಯಿತು. ಈ ಪ್ರಕರಣದ ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತನ ವಿರುದ್ಧ ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ಆರೋಪಿತ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಈ ಪ್ರಕರಣದ 1 ರಿಂದ 10 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 1 ರಿಂದ 10 ನೇ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು 1 ರಿಂದ 10 ನೇ ಆರೋಪಿತನ ಗುರುತಿಸುವಿಕೆಗೆ 1 ರಿಂದ 10 ನೇ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ ಆರ್ ಎಚ್ ಪರವರಿಗೆ ಶ್ರೀ ಎಂ ಜಿ ಎಚ್ ವಕೀಲರಿಂದಃ**

ಪಾಟೀಸವಾಲು ಸಮಯ ಕೋರಿದ್ದು, ಈ ಪ್ರಕರಣವು 2020 ರ ಪ್ರಕರಣ ಆಗಿರುವುದರಿಂದ ಮತ್ತು ಸೂಕ್ತ ಕಾರಣ ನೀಡದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ ನಂಃ 596/2020

ಸಿಡಬ್ಲ್ಯೂಃ 8 ಪಿಡಬ್ಲ್ಯೂಃ 7

| | |
|---|---|
| ಹೆಸರುಃ | ಭಾಸ್ಕರ ಕಲ್ಲಾ ನಾಯ್ಕ |
| ತಂದೆ ಹೆಸರುಃ | ಕಲ್ಲಾ ನಾಯ್ಕ |
| ವಯಸ್ಸುಃ | 45 ವರ್ಷ |
| ಉದ್ಯೋಗಃ | ಕೂಲಿ |

ವಾಸಃ                ಕೊಂಡ್ಲಿ

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 07-01-2026 ರಂದು ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ</u>**

ಚಾಸಾ-1, 4 ರಿಂದ 7 ರವರು ಗೊತ್ತು . ದಿಃ 16-07-2020 ರಂದು ಬೆಳಿಗ್ಗೆ 10-30 ಕ್ಕೆ ಚಾಸಾ-1 ರವರ ಗದ್ದೆ ಕೆಲಸಕ್ಕೆ ನಾನು, ಚಾಸಾ-7 ರವರು ಹೋಗಿದ್ದೆವು. ಚಾಸಾ-1 ರವರ ಗದ್ದೆ ಯಲ್ಲಿ ಕೆಲಸ ಮಾಡುತ್ತಿರುವಾಗ , ಆರೋಪಿತರು ಚಾಸಾ-1 ಮತ್ತು 4 ರವರಿಗೆ ಬಡಿಗೆಯಿಂದ ಹೊಡೆದಿರುತ್ತಾರೆ. 8 ನೇ ಆರೋಪಿ ಚಾಸಾ-1 ರವರಿಗೆ ಕತ್ತಿಯಿಂದ ಹೊಡೆದಿರುತ್ತಾರೆ. ಸದರಿ ಗಲಾಟೆಯನ್ನು ನಾನು ಮತ್ತು ಚಾಸಾ-5 ರಿಂದ 7 ರವರು ಬಿಡಿಸಿರುತ್ತೇವೆ. ಆ ದಿನ ಚಾಸಾ-1 ಮತ್ತು 4 ರವರಿಗೆ ಹೊಡೆದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 1 ರಿಂದ 10 ನೇ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು 1 ರಿಂದ 10 ನೇ ಆರೋಪಿತನ ಗುರುತಿಸುವಿಕೆಗೆ 1 ರಿಂದ 10 ನೇ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ. ಆ ದಿನ ಚಾಸಾ-1 ಮತ್ತು 4 ರವರಿಗೆ ಆರೋಪಿತರು ಹೊಡೆಯಲು ಉಪಯೋಗಿದ ನಾಲ್ಕು ಬಡಿಗೆ ಮತ್ತು ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ.

2. ಆರೋಪಿತರು ಚಾಸಾ-1 ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆ. ಆರೋಪಿತರು ಚಾಸಾ-1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

3. ಚಾಸಾ-1 ಮತ್ತು 4 ರವರನ್ನು ಸಿದ್ದಾಪುರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆ. ಆ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಹಾಗೂ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ ಸಾಕ್ಷಿಯು



ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷ್ಯ ನುಡಿರುವುದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ರವರಿಂದಃ</u>**

ದಿಃ 16-07-2020 ರಂದು ಬೆಳಿಗ್ಗೆ 10-30 ಕ್ಕೆ 2 ನೇ ಆರೋಪಿ ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕುತ್ತಿಗೆಯನ್ನು ಹಿಡಿದು ದೂಡಿರುತ್ತಾರೆ ಎಂದರೆ ಸರಿ. 8 ನೇ ಆರೋಪಿ ಆ ದಿನ ಚಾಸಾ-1 ರವರಿಗೆ ಕತ್ತಿಯಿಂದ

ತಲೆಗೆ ಹೊಡೆದುಗಾಯ ಪಡಿಸಿರುತ್ತಾರೆ ಎಂದರೆ ಸರಿ. 3 ರಿಂದ 6 ನೇ ಆರೋಪಿತರು ಚಾಸಾ-1 ರವರಿಗೆ ಬಡಿಗೆಯಿಂದ ಎಡಗೈ ಮತ್ತು ಬಲಗಾಲಿಗೆ ಹೊಡೆದಿರುತ್ತಾರೆ ಎಂದರೆ ಸರಿ. 4 ಮತ್ತು 6 ನೇ ಆರೋಪಿತರು ಚಾಸಾ-4 ರವರಿಗೆ ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ ಆರ್ ಎಚ್ ಪರವರಿಗೆ ಶ್ರೀ ಎಂ ಜಿ ಎಚ್ ವಕೀಲರಿಂದಃ**

ಪಾಟೀಸವಾಲು ಸಮಯ ಕೋರಿದ್ದು, ಈ ಪ್ರಕರಣವು 2020 ರ ಪ್ರಕರಣ ಆಗಿರುವುದರಿಂದ ಮತ್ತು ಸೂಕ್ತ ಕಾರಣ ನೀಡದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ ನಂಃ 596/2020

ಸಿಡಬ್ಲ್ಯೂಃ 7  ಪಿಡಬ್ಲ್ಯೂಃ 6

| | |
|---|---|
| ಹೆಸರುಃ | ಸುಧಿರ ಸದಾಶೀವ  ನಾಯ್ಕ |
| ತಂದೆ ಹೆಸರುಃ | ಸದಾಶೀವ  ನಾಯ್ಕ |
| ವಯಸ್ಸುಃ | 45 ವರ್ಷ |
| ಉದ್ಯೋಗಃ | ಕೃಷಿ |
| ವಾಸಃ | ಹೊಸಮಂಜು, |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 07-01-2026 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ಚಾಸಾ–1, 4 ರಿಂದ 6 ಮತ್ತು 8 ರವರು ಗೊತ್ತು . ದಿಃ 16–07–2020 ರಂದು ಬೆಳಿಗ್ಗೆ 10–30 ಕ್ಕೆ ಚಾಸಾ–1 ರವರ ಗದ್ದೆ ಕೆಲಸಕ್ಕೆ ನಾನು ಚಾಸಾ–8 ರವರು ಹೋಗಿದ್ದೆವು. ಚಾಸಾ–1 ರವರ ಗದ್ದೆ ಯಲ್ಲಿ ಕೆಲಸ ಮಾಡುತ್ತಿರುವಾಗ 4 ನೇ ಆರೋಪಿ ಅಲ್ಲಿಗೆ ಬಂದು, ಕತ್ತಿಯಿಂದ ಮತ್ತು ಬಡಿಗೆಯಿಂದ ಚಾಸಾ–1 ರವರಿಗೆ ಹೊಡೆದಿರುತ್ತಾರೆ. ಸದರಿ 4 ನೇ ಆರೋಪಿ ಜೊತೆ ಸುಮಾರು 8–10 ಜನ ಇದ್ದು ಸದರಿಯವರು ಸಹ ಚಾಸಾ–1 ಮತ್ತು ಚಾಸಾ–4 ರವರಿಗೆ ಹೊಡೆದಿರುತ್ತಾರೆ. ಸದರಿ ಗಲಾಟೆಯನ್ನು ನಾನು ಮತ್ತು ಚಾಸಾ–5 , 6 ಮತ್ತು 8 ರವರು ಬಿಡಿಸಿರುತ್ತೇವೆ. ಆ ದಿನ ಚಾಸಾ–1 ಮತ್ತು 4 ರವರಿಗೆ ಹೊಡೆದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 1 ರಿಂದ 10 ನೇ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು 1 ರಿಂದ 10 ನೇ ಆರೋಪಿತನ ಗುರುತಿಸುವಿಕೆಗೆ 1 ರಿಂದ 10 ನೇ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ. ಆ ದಿನ ಚಾಸಾ–1 ಮತ್ತು 4 ರವರಿಗೆ ಆರೋಪಿತರು ಹೊಡೆಯಲು ಉಪಯೋಗಿದ ನಾಲ್ಕು ಬಡಿಗೆ ಮತ್ತು ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳು ಈಗಾಗಲೆಲ ಮು.ಮಾ–1 ಎಂದು ಗುರುತಿಸಲಾಗಿದೆ.

2. ಆರೋಪಿತರು ಚಾಸಾ–1 ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆ. ಆರೋಪಿತರು ಚಾಸಾ–1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

3. ಚಾಸಾ–1 ಮತ್ತು 4 ರವರನ್ನು ಸಿದ್ದಾಪುರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿರುತ್ತೇವೆ. ಆ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.



(ಈ ಹಂತದಲ್ಲಿ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಹಾಗೂ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ ಸಾಕ್ಷಿಯು ಅಭಿಯೋಜನೆಗೆ ವಿರುದ್ದವಾಗಿ ಸಾಕ್ಷ್ಯ ನುಡಿರುವುದರಿಂದ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಎ.ಪಿ.ಪಿ ರವರಿಂದಃ**

ದಿಃ 16–07–2020 ರಂದು ಬೆಳಿಗ್ಗೆ 10–30 ಕ್ಕೆ 2 ನೇ ಆರೋಪಿ ಚಾಸಾ–1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಕುತ್ತಿಗೆಯನ್ನು ಹಿಡಿದು ದೂಡಿರುತ್ತಾರೆ ಎಂದರೆ ಸರಿ. 8 ನೇ ಆರೋಪಿ ಆ ದಿನ ಚಾಸಾ–1 ರವರಿಗೆ ಕತ್ತಿಯಿಂದ ತಲೆಗೆ ಹೊಡೆದುಗಾಯ ಪಡಿಸಿರುತ್ತಾರೆ ಎಂದರೆ ಸರಿ. 3 ರಿಂದ 6 ನೇ ಆರೋಪಿತರು ಚಾಸಾ–1 ರವರಿಗೆ ಬಡಿಗೆಯಿಂದ ಎಡಗೈ ಮತ್ತು ಬಲಗಾಲಿಗೆ ಹೊಡೆದಿರುತ್ತಾರೆ ಎಂದರೆ ಸರಿ. 4 ಮತ್ತು 6 ನೇ ಆರೋಪಿತರು ಚಾಸಾ–4 ರವರಿಗೆ ಕೈಯಿಂದ ಹೊಡೆದಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ ಆರ್ ಎಚ್ ಪರವರಿಗೆ ಶ್ರೀ ಎಂ ಜಿ ಎಚ್ ವಕೀಲರಿಂದಃ**

ಪಾಟೀಸವಾಲು ಸಮಯ ಕೋರಿದ್ದು, ಈ ಪ್ರಕರಣವು 2020 ರ ಪ್ರಕರಣ ಆಗಿರುವುದರಿಂದ ಮತ್ತು ಸೂಕ್ತ ಕಾರಣ ನೀಡದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಿದ್ದಾಪುರ

ಸಿ.ಸಿ ನಂಃ 596/2020

ಸಿಡಬ್ಲ್ಯೂಃ 6 ಪಿಡಬ್ಲ್ಯೂಃ 5

| | |
|---|---|
| ಹೆಸರುಃ | ಕೃಷ್ಣ ವೀರಭದ್ರ ನಾಯ್ಕ |
| ತಂದೆ ಹೆಸರುಃ | ವೀರಭದ್ರ ನಾಯ್ಕ |
| ವಯಸ್ಸುಃ | 69 ವರ್ಷ |
| ಉದ್ಯೋಗಃ | ಕೂಲಿ |
| ವಾಸಃ | ಹೊಸಮಂಜು, ಬಿಳಗಿ |

ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ 07-01-2026 ರಂದು ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ಚಾಸಾ-1, 5 ,7 ,8 ರವರು ಗೊತ್ತು . ದಿಃ 16-07-2020 ರಂದು ಬೆಳಿಗ್ಗೆ 10-30 ಕ್ಕೆ ಚಾಸಾ-1 ರವರ ಗದ್ದೆ ಕೆಲಸಕ್ಕೆ ನಾನು ಚಾಸಾ-5 ಮತ್ತು 7 ರವರು ಹೋಗಿದ್ದೆವು. ಚಾಸಾ-1 ರವರ ಗದ್ದೆ ಯಲ್ಲಿ ಕೆಲಸ ಮಾಡುತ್ತಿರುವಾಗ 2 ನೇ ಆರೋಪಿ ಅಲ್ಲಿಗೆ ಬಂದು, ಚಾಸಾ-1 ರವರಿಗೆ ಹೊಡೆಯಲು ಪ್ರಾರಂಬಿಸಿರುತ್ತಾರೆ. 8 ನೇ ಆರೋಪಿ ಕತ್ತಿಯನ್ನು ತೆಗೆದುಕೊಂಡು ಬಂದು ಚಾಸಾ-1 ರವರ ಎಡಮುಖಕ್ಕೆ ಕತ್ತಿಯಿಂದ ಹೊಡೆದಿರುತ್ತಾರೆ. 2 ನೇ ಆರೋಪಿ ಚಾಸಾ-4 ರವರಿಗೆ ಬಡಿಗೆಯಿಂದ ಹೊಡೆದಿರುತ್ತಾರೆ. ಉಳಿದ ಆರೋಪಿತರು ಸಹ ಚಾಸಾ-1 ಮತ್ತು 4 ರವರಿಗೆ ಬಡಿಗೆಯಿಂದ ಹೊಡೆದಿರುತ್ತಾರೆ. ಸದರಿ ಗಲಾಟೆಯನ್ನು ನಾನು ಮತ್ತು ಚಾಸಾ-7 ಮತ್ತು 8 ರವರು ಬಿಡಿಸಿರುತ್ತೇವೆ. ನಾನು ಈ ಪ್ರಕರಣಕ್ಕೆ ಸಂಬಂದಿಸಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆ ದಿನ ಚಾಸಾ-1 ಮತ್ತು 4 ರವರಿಗೆ ಹೊಡೆದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ 1 ರಿಂದ 10 ನೇ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು 1 ರಿಂದ 10 ನೇ ಆರೋಪಿತನ ಗುರುತಿಸುವಿಕೆಗೆ 1 ರಿಂದ 10 ನೇ ಆರೋಪಿ ಪರ ವಕೀಲರು ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿರುತ್ತಾರೆ. ಆ ದಿನ ಚಾಸಾ-1 ಮತ್ತು 4 ರವರಿಗೆ ಆರೋಪಿತರು ಹೊಡೆಯಲು ಉಪಯೋಗಿದ ನಾಲ್ಕು ಬಡಿಗೆ ಮತ್ತು ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಮು.ಮಾ-1 ಎಂದು ಗುರುತಿಸಲಾಯಿತು.

2. ಆರೋಪಿತರು ಚಾಸಾ-1 ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆ. ಆರೋಪಿತರು ಚಾಸಾ-1 ಮತ್ತು 4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.



**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ ಆರ್ ಎಚ್ ಪರವರಿಗೆ ಶ್ರೀ ಎಂ ಜಿ ಎಚ್ ವಕೀಲರಿಂದಃ**

ಪಾಟೀಸವಾಲು ಸಮಯ ಕೋರಿದ್ದು, ಈ ಪ್ರಕರಣವು 2020 ರ ಪ್ರಕರಣ ಆಗಿರುವುದರಿಂದ ಮತ್ತು ಸೂಕ್ತ ಕಾರಣ ನೀಡದೇ ಇರುವುದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ ಸರಿ ಇದೆ.**

**ಸಹಿ ಇದೆ.**

**ಜೆ.ಎಂ.ಎಫ್.ಸಿ, ಸಿದ್ದಾಪುರ.**